BEFORE THE HON'BLE NATIONAL GREEN TRIBUNAL(SZ) CHENNAI.

Execution Application No. 1 of 2021

IN

O.A. No. 144 of 2017.

IN THE MATTER OF :-

E. UMA ..APPLICANT

Versus

THE STATE OF KARNATAKA, & OTHERS. ....RESPONDENTS.

**Next Date :- 25.03.2022**

INDEX.


| Sr. No. | Particulars. | Pages. No. |
|---|---|---|
| 1. | Translated copy of action taken Report in Execution Application No. 1 of 2021 in O.A. No. 144 of 2017. | 1-4 |
| 2. | True copy of action taken Report in Execution Application No. 1 of 2021 in O.A. No. 144 of 2017. | 5-7 |


Filed by:-

THROUGH

Date:- 24/03/2022
Place New Delhi

MR.DARPAN K.M
Advocate for the Respondent.
K-6,LGF, Lajpat Nagar- 3
New Delhi 110024
Mob : + 91 9899125060
Email - darpan.advocate@gmail.com

**TRANSLATED COPY**

**GOVERNMENT OF KARNATAKA**
**Department of Mines & Geology**
Office of the Senior Geologist, Vidyanagara 1st Cross, Mandya District-571 401.
**E-mail: dmgmandya@gmail.com** **Phone: 08232-221369**

No. DMG/SG/QL/2021-22 Date: 22-03-2022

To,
The Director,
Department of Mines & Geology,
Bengaluru.

Sir,

Subject Regarding taking action as per the order of the Hon'ble National Green Tribunal in OA No.144/2017 dated 09-07-2021.

Ref: 1. Order of the Hon'ble National Green Tribunal (SZ), Chennai, Regarding Execution Application No. 01 of 2021 (SZ) in OA No.144/2017, dated 23-02-2022

2. This Office letter No. DMG/SG/QL/2021-22, dated 05-01-2022.

*****

With reference to the above subject, Order of the Hon'ble National Green Tribunal (SZ), Chennai, Regarding Execution Application No. 01 of 2021 (SZ) in OA No.144/2017, dated 23-02-2022 it was instructed to examine the points mentioned in the order dated 23-02-2022 and take necessary action and submit the report regarding the action taken. In this regard already the interim report has been submitted as per reference (2) and the continued report is as hereunder.

- M/s. Maruthi Stone Crusher, Prop: K.M.Ravi, Bankapura Village, Nagamangala Taluk, has submitted an application on 28-11-2016 requesting to grant License for establishment of Crusher in Sy.No. 34 of Gollarahalli Village, Nagamangala Taluk.

- The said applied area has been declared as Safer Zone by the District Stone Crushers Licensing & Regulation Authority and Compliance Certificate (Form B1) has been issued on 26-12-2018.
- The office of the Deputy Commissioner, Mandya District, has issued Land Conversion Order for the applied area from agricultural purpose to non-agricultural purpose for establishment of stone crushing unit vide Official Memorandum No. 143083 dated 15-09-2020 .
- The Karnataka State Pollution Control Board Range Office, Mysuru has issued order of Consent For Operation vide order No. AW-323758 dated 15-02-2021 for crusher unit.
- A penalty of Rs. 7,14,750/- has been levied to the applicant for unauthorized operation of the crushing unit and for unauthorized stacking of minor mineral in the crushing unit area. An endorsement has been issued to the applicant stating that license will be issued after payment of the penalty amount.
- In this regard, the applicant has remitted the penalty amount of Rs.1,00,000/- and requested additional time for remitting the balance penalty amount.
- As per the order of the Hon'ble National Green Tribunal in original application No. 144/2017 dated 09-07-2021, the technical officer of this office inspected the crusher unit along with the officers of the Revenue, Forest and Police Departments on 04-11-2021 and 20-11-2021 and submitted the report stating that the crusher unit was not in operation.
- The technical officer of this office inspected the crusher unit along with the officers of the Revenue Department on 02-12-2021 and found during the inspection that the crusher unit was operated and in the conveyor place of the crusher unit, there was jelly and there were marks of transportation of the jelly products and about 100 MT of building stone (rough) was stacked

in the Government land in Sy.No. 143 of Gangasamudra Village in the northern direction of the crusher unit.

- Operation of the crusher unit by the applicant without obtaining the crusher license and stacking of 100 MT of building stone illegally is in violation of Section 3 (1) of Karnataka Regulation of Stone Crushers Act, 2011 and Section 4 and 4(1a) of Mines & Minerals (Development & Regulation) Act, 1957 and also in clear violation of Rule 3(1), 42(1) and 43 of Karnataka Minor Mineral Concession Rules, 1994.

- In this regard, a private complaint has been registered against the applicant under Section 16 of Karnataka Regulation of Stone Crushers Act, 2011 and Section 21 of Mines & Minerals (Development & Regulation) Act, 1957 and under Rule 44 of Karnataka Minor Mineral Concession Rules, 1994, before the Hon'ble Civil Judge (Jr.Dn.) & JMFC, Nagamangala on 16-12-2021.

- As per the order dated 09-07-2021 of the Hon'ble National Green Tribunal in Original Application No. 144/2017, the Deputy Commissioner, Mandya District, has instructed the Environmental Officer, Regional Office, Karnataka State Pollution Control Board, Mandya, to verify the points in the order and submit compliance.

- Accordingly, the Environmental Officer, Regional Office, Karnataka State Pollution Control Board, Mandya, has submitted a report stating that the conditions prescribed in the Consent For Operation (CFO) has not been followed completely and in this regard, a Show Cause Notice was served to the applicant.

- The file was placed before the District Crushers Licensing and Regulation Authority Meeting held on 21-12-2021 and discussed in the meeting. The Environment officer present in the meeting was instructed to prepare the report regarding issuance of crusher license to the applicant after the

applicant submits the reply to the show cause notice issued by the Environment Officer and submit to the Authority.

- The Technical officer of this office inspected the crusher unit on 04-01-2022 and during the inspection it is found that there was no power connection to the crusher unit. He has submitted a report that, a diesel generator has been provided to the crusher unit and since there is possibility of operating the crusher unit with the said diesel generator machine illegally, the said diesel generator machine fan and the machine established have been sealed with iron chain.

- After the applicant M/s. Maruthi Stone Crusher submits reply to the show cause notice issued regarding not following the conditions completely prescribed in the Consent For Operation and as per the report to be submitted by the Environment Officer to the Authority, further action will be taken in accordance with the Rules regarding issuance of license (Form-C) to the crusher Unit of M/s. Maruthi Stone Crusher. This is for your information and further action.

Yours faithfully,
Sd/-
Senior Geologist,
Dept. of Mines & Geology,
Mandya.

Copy to:

1) The Deputy Commissioner & Chairman, District Stone Crushers Licensing & Regulation Authority, Mandya District, Mandya - for information.
2) The Legal Officer, Office of the Director, Dept. of Mines & Geology, Bengaluru - for information.
3) Sri Darpan K.M, Advocate, No: K-06, Lower Basement Floor, Lachpathnagar-III, New Delhi-110204.

Sd/-
Senior Geologist,
Dept. of Mines & Geology,
Mandya.

**ಕರ್ನಾಟಕ ಸರ್ಕಾರ**
**ಗಣಿ ಮತ್ತು ಭೂವಿಜ್ಞಾನ ಇಲಾಖೆ**
**ಹಿರಿಯ ಭೂವಿಜ್ಞಾನಿಯವರ ಕಛೇರಿ, ವಿದ್ಯಾನಗರ 1ನೇ ಕ್ರಾಸ್, ಮಂಡ್ಯ ಜಿಲ್ಲೆ-571401**
**Email: dmgmandya@gmail.com** **ದೂರವಾಣಿ ಸಂಖ್ಯೆ :08232-221369**

ಸಂಖ್ಯೆ:ಗಭೂಇ/ಹಿಭೂವಿ/ಕಗಗು/2021-22 /7035 ದಿನಾಂಕ:22-03-2022

**ಇವರಿಗೆ,**

ಮಾನ್ಯ ನಿರ್ದೇಶಕರು,
ಗಣಿ ಮತ್ತು ಭೂವಿಜ್ಞಾನ ಇಲಾಖೆ,
ಖನಿಜ ಭವನ,
ಬೆಂಗಳೂರು.

ವಿಷಯ: ಮಾನ್ಯ ರಾಷ್ಟ್ರೀಯ ಹಸಿರು ಪೀಠ OA No:144/2017 ರ ಆದೇಶ ದಿನಾಂಕ:09-07-2021 ರಂತೆ ಕ್ರಮವಹಿಸುವ ಬಗ್ಗೆ

ಉಲ್ಲೇಖ:1) ಮಾನ್ಯ ರಾಷ್ಟ್ರೀಯ ಹಸಿರು ಪೀಠ, ದಕ್ಷಿಣ ವಲಯ, ಚೆನ್ನೈ, Execution Application No: 01 of 2021 (SZ) in Original Application No:144/2017 ರ ಆದೇಶ ದಿನಾಂಕ:23-02-2022.

2) ಈ ಕಛೇರಿ ಪತ್ರ ಸಂಖ್ಯೆ: ಗಭೂಇ /ಹಿಭೂವಿ /ಕಗಗು/2021-22/ ದಿನಾಂಕ:05-01-2022.

*****

ಮೇಲ್ಕಂಡ ವಿಷಯಕ್ಕೆ ಸಂಬಂಧಿಸಿದಂತೆ, ಮಾನ್ಯ ರಾಷ್ಟ್ರೀಯ ಹಸಿರು ಪೀಠ, ದಕ್ಷಿಣ ವಲಯ, ಚೆನ್ನೈ, Execution Application No: 01 of 2021 (SZ) in Original Application No:144/2017 ರ ಆದೇಶ ದಿನಾಂಕ:23-02-2022 ರಲ್ಲಿನ ಅಂಶಗಳಾನುಸಾರ ಪರಿಶೀಲಿಸಿ ಅಗತ್ಯ ಕ್ರಮ ಕೈಗೊಂಡು, ದಿನಾಂಕ:25-03-2022 ರೊಳಗೆ ಕೈಗೊಂಡ ಕ್ರಮದ ಬಗ್ಗೆ ವರದಿ ಸಲ್ಲಿಸಲು ಮಾನ್ಯ ರಾಷ್ಟ್ರೀಯ ಹಸಿರು ಪೀಠ ದಕ್ಷಿಣ ವಲಯ, ಚೆನ್ನೈ ಇವರು ಉಲ್ಲೇಖ (1) ರಂತೆ ಆದೇಶಿಸಿರುತ್ತಾರೆ. ಈ ಸಂಬಂಧ ಉಲ್ಲೇಖ (2) ರಂತೆ ಈಗಾಗಲೇ ಮಧ್ಯಂತರ ವರದಿ ಸಲ್ಲಿಸಿದ್ದು, ಮುಂದುವರೆದ ವರದಿ ಕೆಳಗಿನಂತಿದೆ.

- ಶ್ರೀ ಮಾರುತಿ ಸ್ಟೋನ್ ಕ್ರಷರ್, ಪ್ರೋ:ಕೆ.ಎಂ. ರವಿ ಬಂಕಾಪುರ ಗ್ರಾಮ, ನಾಗಮಂಗಲ ತಾಲ್ಲೂಕು, ರವರು ನಾಗಮಂಗಲ ತಾಲ್ಲೂಕು, ಗೊಲ್ಲರಹಳ್ಳಿ ಗ್ರಾಮದ ಸರ್ವೆ ನಂ:34 ರ 1-05 ಎಕರೆ ಪ್ರದೇಶದಲ್ಲಿ ಕ್ರಷರ್ ಪರವಾನಿಗೆ ಕೋರಿ ದಿನಾಂಕ:28-11-2016 ರಂದು ಅರ್ಜಿ ಸಲ್ಲಿಸಿರುತ್ತಾರೆ.
- ಸದರಿ ಅರ್ಜಿತ ಪ್ರದೇಶವನ್ನು ಜಿಲ್ಲಾ ಕಲ್ಲುಪುಡಿ ಮಾಡುವ ಘಟಕಗಳ ಲೈಸೆನ್ಸಿಂಗ್ ಮತ್ತು ನಿಯಂತ್ರಣ ಪ್ರಾಧಿಕಾರದಿಂದ ಕ್ರಷರ್ ಸುರಕ್ಷಿತಾ ವಲಯ ಘೋಷಿಸಿ, ಅನುಪಾಲನಾ ಪ್ರಮಾಣ ಪತ್ರ (ಫಾರಂ-ಬಿ1) ದಿನಾಂಕ26-12-2018 ರಂದು ವಿತರಿಸಲಾಗಿರುತ್ತದೆ. (ಪ್ರತಿಯನ್ನು ಅನುಬಂಧ-1 ರಂತೆ ಲಗತ್ತಿಸಿದೆ)
- ಮಾನ್ಯ ಜಿಲ್ಲಾಧಿಕಾರಿಗಳ ಕಾರ್ಯಾಲಯ, ಮಂಡ್ಯ ಜಿಲ್ಲೆ, ರವರ ಅಧಿಕೃತ ಜ್ಞಾಪನ ಪತ್ರ ಸಂ:143083, ದಿ:15-09-2020 ರಂತೆ ಅರ್ಜಿತ ಪ್ರದೇಶವನ್ನು ಕೃಷಿಯೇತರ ಕ್ರಷರ್ ಸ್ಥಾಪನೆ ಉದ್ದೇಶಕ್ಕೆ ಭೂ-ಪರಿವರ್ತನಾ ಆದೇಶವನ್ನು ಹೊರಡಿಸಲಾಗಿರುತ್ತದೆ. (ಪ್ರತಿಯನ್ನು ಅನುಬಂಧ-2 ರಂತೆ ಲಗತ್ತಿಸಿದೆ)
- ಕರ್ನಾಟಕ ರಾಜ್ಯ ಮಾಲಿನ್ಯ ನಿಯಂತ್ರಣ ಮಂಡಳಿ ವಲಯ ಕಛೇರಿ, ಮೈಸೂರು ರವರ ಕಾರ್ಯಾಚರಣಾ ಸಮ್ಮತಿ ಆದೇಶ ಸಂ:AW-323758, Date:15-02-2021 ರಂತೆ ಕ್ರಷರ್ ಘಟಕಕ್ಕೆ ಕಾರ್ಯಾಚರಣಾ ಸಮ್ಮತಿ ಪತ್ರ (C.F.O.) ವಿತರಿಸಿರುತ್ತಾರೆ. (ಪ್ರತಿಯನ್ನು ಅನುಬಂಧ-3 ರಂತೆ ಲಗತ್ತಿಸಿದೆ)

- ಅರ್ಜಿದಾರರಿಗೆ ಅನಧಿಕೃತ ಕ್ರಷರ್ ಚಾಲನೆ ಹಾಗೂ ಕ್ರಷರ್ ಘಟಕ ಪ್ರದೇಶದಲ್ಲಿ ಅನಧಿಕೃತವಾಗಿ ಉಪಖನಿಜ ದಾಸ್ತಾನು ಮಾಡಿರುವ ಸಂಬಂಧ ಈ ಕಛೇರಿಯಿಂದ ರೂ. 7,14,750-00 ದಂಡ ವಿಧಿಸಲಾಗಿದ್ದು, ಸದರಿ ದಂಡದ ಮೊತ್ತವನ್ನು ಪಾವತಿಸಿದ ನಂತರ ಕ್ರಷರ್ ಪರವಾನಿಗೆ ವಿತರಿಸಲು ಕ್ರಮವಹಿಸುವುದಾಗಿ ಸೂಚಿಸಿ ಹಿಂಬರಹ ನೀಡಲಾಗಿರುತ್ತದೆ. (ಪ್ರತಿಯನ್ನು ಅನುಬಂಧ-4 ರಂತೆ ಲಗತ್ತಿಸಿದೆ)
- ಈ ಸಂಬಂಧ ಅರ್ಜಿದಾರರು ರೂ. 1,00,000-00 ದಂಡದ ಮೊತ್ತವನ್ನು ಪಾವತಿಸಿದ್ದು, ಉಳಿಕೆ ದಂಡದ ಮೊತ್ತವನ್ನು ಪಾವತಿಸಲು ಕಾಲಾವಕಾಶ ಕೋರಿರುತ್ತಾರೆ. (ಪ್ರತಿಯನ್ನು ಅನುಬಂಧ-5 ರಂತೆ ಲಗತ್ತಿಸಿದೆ)
- ಮಾನ್ಯ ರಾಷ್ಟ್ರೀಯ ಹಸಿರು ಪೀಠವು ಮೂಲ ಅರ್ಜಿ ಸಂ:144/2017 ರಲ್ಲಿ ದಿನಾಂಕ:09-07-2021 ರಂದು ಹೊರಡಿಸಿರುವ ಆದೇಶದಂತೆ ಈ ಕಛೇರಿಯ ತಾಂತ್ರಿಕ ಅಧಿಕಾರಿಗಳು ಕ್ರಷರ್ ಘಟಕವನ್ನು ದಿನಾಂಕ: 04-11-2021, ದಿನಾಂಕ:20-11-2021 ರಂದು ಕಂದಾಯ, ಅರಣ್ಯ ಹಾಗೂ ಪೊಲೀಸ್ ಇಲಾಖೆಯ ಅಧಿಕಾರಿಗಳೊಂದಿಗೆ ಪರಿಶೀಲಿಸಿದ್ದು, ಪರಿಶೀಲನೆ ಸಮಯದಲ್ಲಿ ಕ್ರಷರ್ ಘಟಕವು ಕಾರ್ಯ ಸ್ಥಗಿತಗೊಳಿಸಿರುವುದು ಕಂಡುಬಂದಿರುವುದಾಗಿ ವರದಿ ಸಲ್ಲಿಸಿರುತ್ತಾರೆ.
- ಕಛೇರಿಯ ತಾಂತ್ರಿಕ ಅಧಿಕಾರಿಗಳು ದಿನಾಂಕ:02-12-2021 ರಂದು ಕಂದಾಯ ಇಲಾಖೆಯ ಅಧಿಕಾರಿಗಳೊಂದಿಗೆ ಕ್ರಷರ್ ಘಟಕವನ್ನು ಪರಿಶೀಲಿಸಿದ್ದು, ಕ್ರಷರ್ ಘಟಕವು ಕಾರ್ಯನಿರ್ವಹಿಸಿರುವುದು ಸ್ಥಳ ಪರಿಶೀಲನಾ ಸಮಯದಲ್ಲಿ ಕಂಡುಬಂದಿರುತ್ತದೆ ಹಾಗೂ ಸದರಿ ಕ್ರಷರ್ ಘಟಕದ ಕನ್ವೆಯರ್ ಜಾಗದಲ್ಲಿ ಜಲ್ಲಿ ಬಿದ್ದಿರುವುದು ಹಾಗೂ ಜಲ್ಲಿ ಉತ್ಪನ್ನಗಳನ್ನು ಸಾಗಾಟ ಮಾಡಿರುವ ಕುರುಹುಗಳು ಪರಿಶೀಲನಾ ಸಮಯದಲ್ಲಿ ಕಂಡುಬಂದಿರುತ್ತದೆ ಹಾಗೂ ಕ್ರಷರ್ ಘಟಕದ ಸಮೀಪ ಉತ್ತರ ದಿಕ್ಕಿಗೆ ಗಂಗಸಮುದ್ರ ಗ್ರಾಮದ ಸರ್ಕಾರಿ ಸರ್ವೆ ನಂ.143ರ ಜಮೀನಿನಲ್ಲಿ ಅಂದಾಜು 100 ಮೆ.ಟನ್ ಪ್ರಮಾಣದ ಕಟ್ಟಡಕಲ್ಲು (ಕಚ್ಛಾ) ದಾಸ್ತಾನಿರುವುದು ಕಂಡುಬಂದಿರುತ್ತದೆ ಹಾಗೂ ಸದರಿ ದಾಸ್ತಾನು ಅನಧಿಕೃತವಾಗಿರುವುದು ಕಂಡುಬಂದಿರುತ್ತದೆ. (ಪ್ರತಿಯನ್ನು ಅನುಬಂಧ-6 ರಂತೆ ಲಗತ್ತಿಸಿದೆ)
- ಅರ್ಜಿದಾರರು ಕ್ರಷರ್ ಪರವಾನಿಗೆ ಪಡೆಯದೆ ಕ್ರಷರ್ ಘಟಕವನ್ನು ಚಾಲನೆ ಮಾಡಿರುವುದು ಹಾಗೂ 100 ಮೆ.ಟನ್ ಕಟ್ಟಡ ಕಲ್ಲನ್ನು ಅನಧಿಕೃತವಾಗಿ ದಾಸ್ತಾನು ಮಾಡಿರುವುದು ಕರ್ನಾಟಕ ಕ್ರಷರ್ ಘಟಕಗಳ ನಿಯಂತ್ರಣ ಅಧಿನಿಯಮ 2011ರ ಕಲಂ 3(1), ಮೈನ್ಸ್ & ಮಿನರಲ್ಸ್ (ಡೆವಲಪ್‌ಮೆಂಟ್ & ರೆಗ್ಯೂಲೇಷನ್) ಕಾಯ್ದೆ 1957ರ ಕಲಂ 4, 4(1ಎ) ಹಾಗೂ ಕರ್ನಾಟಕ ಉಪಖನಿಜ ರಿಯಾಯಿತಿ ನಿಯಮಗಳು 1994ರ ನಿಯಮ 3(1), 42(1), 43ರ ಸ್ಪಷ್ಟ ಉಲ್ಲಂಘನೆಯಾಗಿರುತ್ತದೆ.
- ಈ ಸಂಬಂಧ ಅರ್ಜಿದಾರರ ಮೇಲೆ ನಾಗಮಂಗಲದ ಮಾನ್ಯ ಸಿವಿಲ್ ಜಡ್ಜ್ (ಕಿ.ಶ್ರೇ) ಮತ್ತು ಜೆ.ಎಂ.ಎಫ್.ಸಿ ನ್ಯಾಯಾಲಯದಲ್ಲಿ ಕರ್ನಾಟಕ ಕ್ರಷರ್ ಘಟಕಗಳ ನಿಯಂತ್ರಣ ಅಧಿನಿಯಮ 2011ರ ಕಲಂ 16, ಮೈನ್ಸ್ & ಮಿನರಲ್ಸ್ (ಡೆವಲಪ್‌ಮೆಂಟ್ & ರೆಗ್ಯೂಲೇಷನ್) ಕಾಯ್ದೆ 1957ರ ಕಲಂ 21 ಹಾಗೂ ಕರ್ನಾಟಕ ಉಪಖನಿಜ ರಿಯಾಯಿತಿ ನಿಯಮಗಳು 1994ರ ನಿಯಮ 44 ರಡಿಯಲ್ಲಿ ಖಾಸಗಿ ಪ್ರಕರಣವನ್ನು ದಿನಾಂಕ: 16-12-2021 ರಂದು ದಾಖಲಿಸಲಾಗಿರುತ್ತದೆ. (ಪ್ರತಿಯನ್ನು ಅನುಬಂಧ-7 ರಂತೆ ಲಗತ್ತಿಸಿದೆ)
- ಮಾನ್ಯ ರಾಷ್ಟ್ರೀಯ ಹಸಿರು ಪೀಠವು ಮೂಲ ಅರ್ಜಿ ಸಂ:144/2017 ರಲ್ಲಿ ದಿನಾಂಕ:09-07-2021 ರಂದು ಹೊರಡಿಸಿರುವ ಆದೇಶದಂತೆ ಪರಿಶೀಲಿಸಿ ಪಾಲನ ವರದಿ ಸಲ್ಲಿಸಲು ಸೂಚಿಸಿ ಮಾನ್ಯ ಜಿಲ್ಲಾಧಿಕಾರಿಗಳು, ಮಂಡ್ಯ ಜಿಲ್ಲೆ ರವರು ಪರಿಸರ ಅಧಿಕಾರಿಗಳು ಪ್ರಾದೇಶಿಕ ಕಛೇರಿ, ಕರ್ನಾಟಕ ರಾಜ್ಯ ಮಾಲಿನ್ಯ ನಿಯಂತ್ರಣ ಮಂಡಳಿ, ಮಂಡ್ಯ ರವರಿಗೆ ಪತ್ರ ಬರೆಯಲಾಗಿರುತ್ತದೆ. (ಪ್ರತಿಯನ್ನು ಅನುಬಂಧ-8 ಲಗತ್ತಿಸಿದೆ)
- ಅದರಂತೆ ಪರಿಸರ ಅಧಿಕಾರಿಗಳು ಪ್ರಾದೇಶಿಕ ಕಛೇರಿ ಮಂಡ್ಯ ರವರು ಕ್ರಷರ್ ಘಟಕವನ್ನು ದಿನಾಂಕ:18-12-2021 ರಂದು ಪರಿಶೀಲಿಸಿದ್ದು, ಕಾರ್ಯಾಚರಣ ಸಮ್ಮತಿ (ಸಿ.ಎಫ್.ಓ) ಪತ್ರದ ಸಂಪೂರ್ಣ ಷರತ್ತುಗಳನ್ನು ಪಾಲಿಸಿರುವುದಿಲ್ಲವೆಂದು ಹಾಗೂ ಈ ಬಗ್ಗೆ ಅರ್ಜಿದಾರರಿಗೆ ಕಾರಣ ಕೇಳಿ ನೋಟೀಸ್ ಜಾರಿಮಾಡಿರುವುದಾಗಿ ವರದಿ ಸಲ್ಲಿಸಿರುತ್ತಾರೆ.(ಪ್ರತಿಯನ್ನು ಅನುಬಂಧ-9 ರಂತೆ ಲಗತ್ತಿಸಿದೆ).
- ಕಡತವನ್ನು ದಿನಾಂಕ: 21-12-2021ರಂದು ನಡೆದ ಜಿಲ್ಲಾ ಕಲ್ಲುಪುಡಿ ಮಾಡುವ ಘಟಕಗಳ ಲೈಸೆನ್ಸಿಂಗ್ ಮತ್ತು ನಿಯಂತ್ರಣ ಪ್ರಾಧಿಕಾರ ಸಭೆಯಲ್ಲಿ ಮಂಡಿಸಿದ್ದು, ಈ ಬಗ್ಗೆ ಸಭೆಯಲ್ಲಿ ಚರ್ಚಿಸಿ ಮೆ: ಮಾರುತಿ ಸ್ಟೋನ್ ಕ್ರಷರ್ ರವರು ಕರ್ನಾಟಕ ರಾಜ್ಯ ಮಾಲಿನ್ಯ ನಿಯಂತ್ರಣ ಮಂಡಳಿಯಿಂದ ವಿತರಿಸಲಾಗಿರುವ ಕಾರ್ಯಾಚರಣ ಸಮ್ಮತಿ (ಸಿ.ಎಫ್.ಓ) ಪತ್ರದಲ್ಲಿನ ಸಂಪೂರ್ಣ ಷರತ್ತುಗಳನ್ನು ಪಾಲಿಸದಿರುವ ಬಗ್ಗೆ ಪರಿಸರ ಅಧಿಕಾರಿಗಳು ಜಾರಿಮಾಡಿರುವ ಕಾರಣ ಕೇಳಿ ನೋಟೀಸ್‌ಗೆ ಉತ್ತರ ಸಲ್ಲಿಸಿದ ನಂತರ ಅರ್ಜಿದಾರರಿಗೆ

ಕ್ರಷರ್ ಪರವಾನಗಿ ವಿತರಿಸುವ ಸಂಬಂಧ ವರದಿಯನ್ನು ಸಿದ್ದಪಡಿಸಿ ಪ್ರಾಧಿಕಾರಕ್ಕೆ ಸಲ್ಲಿಸಲು ಸಭೆಯಲ್ಲಿ ಹಾಜರಿದ್ದ ಪರಿಸರ ಅಧಿಕಾರಿಗಳಿಗೆ ಸೂಚಿಸಲಾಗಿರುತ್ತದೆ.

- ಈ ಕಛೇರಿ ತಾಂತ್ರಿಕ ಅಧಿಕಾರಿಗಳು ದಿನಾಂಕ: 04-01-2022 ರಂದು ಕ್ರಷರ್ ಘಟಕವನ್ನು ಪರಿಶೀಲಿಸಿದ್ದು, ಪರಿಶೀಲನಾ ಸಮಯದಲ್ಲಿ ಕ್ರಷರ್ ಘಟಕಕ್ಕೆ ವಿದ್ಯುತ್ ಸಂಪರ್ಕ ಕಲ್ಪಿಸಿರುವುದು ಕಂಡುಬಂದಿರುವುದಿಲ್ಲ. ಕ್ರಷರ್ ಘಟಕಕ್ಕೆ ಡೀಸೆಲ್ ಜನರೇಟರ್ ಅಳವಡಿಸಿಕೊಂಡಿದ್ದು, ಸದರಿ ಡೀಸೆಲ್ ಜನರೇಟರ್ ಯಂತ್ರದಿಂದ ಕ್ರಷರ್ ಘಟಕವನ್ನು ಅನಧಿಕೃತವಾಗಿ ಚಾಲನೆ ಮಾಡುವ ಸಂಭವ ಇರುವುದರಿಂದ ಸದರಿ ಡೀಸೆಲ್ ಜನರೇಟರ್ ಯಂತ್ರದ ಫ್ಯಾನ್ ಹಾಗೂ ಯಂತ್ರವನ್ನು ಸ್ಥಾಪಿಸಿರುವ ಕಬ್ಬಿಣದ ಸಲಾಕೆಗೆ ಸರಪಳಿಯಿಂದ ಸೀಲ್ ಮಾಡಿರುವುದಾಗಿ ವರದಿ ಸಲ್ಲಿಸಿರುತ್ತಾರೆ (ಪ್ರತಿಯನ್ನು ಅನುಬಂಧ-10 ರಂತೆ ಲಗತ್ತಿಸಿದೆ).

ಪರಿಸರ ಅಧಿಕಾರಿಗಳು ಕ್ರಷರ್ ಘಟಕಕ್ಕೆ ವಿತರಿಸಲಾಗಿರುವ ಕಾರ್ಯಾಚರಣ ಸಮ್ಮತಿ ಪತ್ರದಲ್ಲಿನ ಸಂಪೂರ್ಣ ಷರತ್ತುಗಳನ್ನು ಪಾಲಿಸದಿರುವ ಬಗ್ಗೆ ಅರ್ಜಿದಾರರಾದ ಮೆ: ಮಾರುತಿ ಸ್ಟೋನ್ ಕ್ರಷರ್ ರವರಿಗೆ ಜಾರಿಮಾಡಿರುವ ಕಾರಣ ಕೇಳಿ ನೋಟೀಸ್‌ಗೆ ಮೆ: ಮಾರುತಿ ಸ್ಟೋನ್ ಕ್ರಷರ್ ರವರು ಉತ್ತರ ಸಲ್ಲಿಸಿದ ನಂತರ ಪರಿಸರ ಅಧಿಕಾರಿಗಳು ಪ್ರಾಧಿಕಾರಕ್ಕೆ ಸಲ್ಲಿಸುವ ವರದಿ ಅನುಸಾರ ಅರ್ಜಿದಾರರಾದ ಮೆ: ಮಾರುತಿ ಸ್ಟೋನ್ ಕ್ರಷರ್ ರವರಿಗೆ ಕ್ರಷರ್ ಪರವಾನಗಿ (ಫಾರಂ-ಸಿ) ವಿತರಿಸುವ ಸಂಬಂಧ ಪ್ರಾಧಿಕಾರದಿಂದ ನಿಯಮಾನುಸಾರ ಮುಂದಿನ ಕ್ರಮವಹಿಸಲಾಗುವುದು ಎಂಬ ಮಾಹಿತಿಯನ್ನು ತಮ್ಮ ಅವಗಾಹನೆ ಹಾಗೂ ಮುಂದಿನ ಕ್ರಮಕ್ಕಾಗಿ ಸಲ್ಲಿಸಿದೆ.

ತಮ್ಮ ವಿಶ್ವಾಸಿ,
ಸಹಿ/-
ಹಿರಿಯ ಭೂವಿಜ್ಞಾನಿ,
ಗಣಿ ಮತ್ತು ಭೂವಿಜ್ಞಾನ ಇಲಾಖೆ,
ಮಂಡ್ಯ.

**ಪ್ರತಿಯನ್ನು:**

1. ಮಾನ್ಯ ಜಿಲ್ಲಾಧಿಕಾರಿಗಳು ಹಾಗೂ ಅಧ್ಯಕ್ಷರು, ಜಿಲ್ಲಾ ಕ್ರಷರ್ ಘಟಕಗಳ ಲೈಸೆನ್ಸಿಂಗ್ ಮತ್ತು ನಿಯಂತ್ರಣ ಪ್ರಾಧಿಕಾರ, ಮಂಡ್ಯ ಜಿಲ್ಲೆ, ಮಂಡ್ಯ ರವರ ಮಾಹಿತಿಗಾಗಿ ಸಲ್ಲಿಸಿದೆ.
2. ಕಾನೂನು ಅಧಿಕಾರಿಯವರು, ನಿರ್ದೇಶಕರ ಕಛೇರಿ, ಗಣಿ ಮತ್ತು ಭೂವಿಜ್ಞಾನ ಇಲಾಖೆ, ಬೆಂಗಳೂರು ರವರ ಮಾಹಿತಿಗಾಗಿ ಸಲ್ಲಿಸಿದೆ.
3. ಶ್ರೀ ದರ್ಪಣ್.ಕೆ.ಎಂ., ಅಡ್ವೋಕೇಟ್ ನಂ.ಕೆ:06, ಲೋವರ್ ಬೇಸ್‌ಮೆಂಟ್ ಫ್ಲೋರ್, ಲಜಪಥ್ ನಗರ್-3, ನವದೆಹಲಿ-110204 ರವರ ಮಾಹಿತಿಗಾಗಿ.

ಹಿರಿಯ ಭೂವಿಜ್ಞಾನಿ,
ಗಣಿ ಮತ್ತು ಭೂವಿಜ್ಞಾನ ಇಲಾಖೆ,
ಮಂಡ್ಯ.